ಈಗಾಗಲೇ ಮಂಜೂರಾತಿ ಕೊಟ್ಟಿದ್ದು, ಡೀಸೆಲ್ ಜನರೇಟರನ್ನು ಖರೀದಿಸಿದ ನಂತರ ನೀರಿನ ಸಮಸ್ಯೆ ಸಾಕಷ್ಟು ಬಗೆಹರಿಯುತ್ತದೆ. ಆ ದೃಷ್ಟಿಯಿಂದ ಟ್ಯಾಂಕರ್ ಇಲ್ಲವೇ ರೈಲ್ ಮುಖಾಂತರ ನೀರನ್ನು ಸರಬರಾಜು ಮಾಡುವ ಅವಶ್ಯಕತೆಯಿಲ್ಲ.

ಶ್ರೀ ವಿ.ಎಸ್. ಕೌಜಲಗಿ : ಡೀಸೆಲ್ ಜನರೇಟರ್ ಬರುವವರೆಗಾದರೂ ಟ್ಯಾಂಕರಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಇನ್ನು ಹದಿನೈದು ದಿವಸಗಳಲ್ಲಿ ಡೀಸೆಲ್ ಜನರೇಟರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ.

ಕೈಗಾರಿಕೆ ಭೂ ಮಂಜೂರಾತಿ

99 - ಶ್ರೀ ಎಂ.ಜಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಗಾರಿಕೆಗಳಿಗೆ ಸಂಬಂಧಪಟ್ಟ ಭೂಮಿಯ ಮಂಜೂರಾತಿ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿರುವುದು ನಿಜವೇ ಹಾಗಿದ್ದಲ್ಲಿ ಅವರಿಗೆ ಎಷ್ಟು ಎಕರೆಯವರೆಗೂ ಮಂಜೂರಾತಿ ಮಾಡಲು ಅಧಿಕಾರ ನೀಡಿದೆ?

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಪಾತ್ರವೇನು?

ಇ) ಕೊಡಗಿನಲ್ಲಿ ಎಷ್ಟು ಎಕರೆಯನ್ನು ಕೈಗಾರಿಕೆಗಾಗಿ ಮೀಸಲಿಡಲಾಗಿದೆ. ಎಕರೆಗೆ ಎಷ್ಟು ಹಣ ಎಂದು ನಿಗದಿಪಡಿಸಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಇತರ ಜಿಲ್ಲೆಗಳಲ್ಲಿ ಯಾವುದೇ ಪರಿಮಿತಿಯಿಲ್ಲದೆ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಜಮೀನನ್ನು ಹಂಚಿಕೆ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾಮಟ್ಟದ ಏಕ ಗವಾಕ್ಷಿ ನಿಯೋಗಕ್ಕೆ ನೀಡಿದೆ.

ಆ) ಸಾಮಾನ್ಯವಾಗಿ ಕೈಗಾರಿಕೆಗಳಿಗಾಗಿ ಭೂಸ್ವಾಧೀನ ಪಡಿಸಿಕೊಳ್ಳುವುದು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಿ ಅಲ್ಲಿ ಕೈಗಾರಿಕಾ ಸ್ಥಾಪನೆಗಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.

ಇ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೊಡಗು ಜಿಲ್ಲೆ ಕುಶಾಲ ನಗರದಲ್ಲಿ ಒಂದು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. ಅಭಿವೃದ್ಧಿಪಡಿಸಿರುವ ವಿಸ್ತೀರ್ಣವು ರೂ. 1.25 ಲಕ್ಷಗಳಂತೆ ಹಂಚಿಕೆ ದರವನ್ನು ನಿಗದಿಪಡಿಸಲಾಗಿದೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಸನ್ಮಾನ್ಯ ಅಧ್ಯಕ್ಷರೆ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಎಷ್ಟು ಎಕರೆಗಳವರೆಗೆ ಪರಿಮಿತಿ ಇದೆಯೆಂದು ಕೇಳಿದ್ದಕ್ಕೆ ಉತ್ತರವಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಇತರ ಜಿಲ್ಲೆಗಳಲ್ಲಿ ಯಾವುದೇ ಪರಿಮಿತಿಯಿರುವುದಿಲ್ಲವೆಂದು ತಿಳಿಸಿದ್ದಾರೆ. ಹಾಗಾದರೆ, ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು 10-15 ಎಕರೆಗಳವರೆಗೆ ಜಮೀನನ್ನು ಕೊಡುತ್ತಾರೆಯೆ? ಇದಕ್ಕೆ ಉತ್ತರಿಸಬೇಕು. ಅದರ ಜೊತೆಗೆ ಕೊಡಗಿನಲ್ಲಿ ಎಷ್ಟು ಎಕರೆಯನ್ನು ಕೈಗಾರಿಕೆಗಾಗಿ ಮೀಸಲಿಡಲಾಗಿದೆ ಎಂದು ಕೇಳಿದ್ದಕ್ಕೆ ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ಒಂದು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಿದ್ದು, ಅಭಿವೃದ್ಧಿಪಡಿಸಿರುವ ವಿಸ್ತೀರ್ಣವೂ 250 ಎಕರೆಗಳಾಗಿರುತ್ತದೆಂದು ಹೇಳಿದ್ದಾರೆ. ಆದರೆ, ಕೈಗಾರಿಕೆಗಾಗಿ ಮೀಸಲಿಟ್ಟಂಥ ಎಕರೆಗಳೆಷ್ಟು ಎಂಬುದನ್ನು ತಿಳಿಸಬೇಕು.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖಾಂತರ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಏನು ಭೂಮಿಯನ್ನು ಕೊಡಲಾಗುತ್ತದೆ, ಅದರ ಬಗ್ಗೆ "ಏಕ ಗವಾಕ್ಷಿ ನಿಯೋಗ" ವನ್ನು ಪ್ರತಿ ಜಿಲ್ಲೆಯಲ್ಲೂ ನಾವು ನಿರ್ಮಿಸಿದ್ದು, ಜಿಲ್ಲಾಧಿಕಾರಿಗಳು ಅದರ ಅಧ್ಯಕ್ಷರಾಗಿರುತ್ತಾರೆ. ಆಯಾ ಜಿಲ್ಲೆಯಲ್ಲಿ ಕೈಗಾರಿಕೆಗೆ ಎಷ್ಟು ಭೂಮಿಯ ಅವಶ್ಯಕತೆ ಇದೆಯೋ ಅಷ್ಟು ಪ್ರಮಾಣದ ಭೂಮಿ ಹಂಚಿಕೆಯಾಗುತ್ತದೆ. ಆದರೆ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕೈಗಾರಿಕೆಗಳಿಗೆ ಜಮೀನನ್ನು ಹಂಚಿಕೆ ಮಾಡಲು ಒಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಒಂದು ಉಪ ಸಮಿತಿ ಇದ್ದು, ಕೈಗಾರಿಕಾ ಆಯುಕ್ತರು ಅದರ ಅಧ್ಯಕ್ಷರಾಗಿರುತ್ತಾರೆ. ಅಲ್ಲದೆ, ಕೈಗಾರಿಕಾ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದಲ್ಲಿ ಮತ್ತೊಂದು 'ಸಿಂಗಲ್ ವಿಂಡೋ ಏಜೆನ್ಸಿ' ಇದ್ದು, ಈ ಎರಡೂ ಏಜೆನ್ಸಿಗಳು ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ಸುಮಾರು 250 ಎಕರೆಗಳಷ್ಟು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಗೊಳಿಸಿದ್ದು, ಈಗಾಗಲೇ ಅಲ್ಲಿ 79 ಎಕರೆಗಳಷ್ಟು ಭೂಮಿ ಬರೀ ಕೈಗಾರಿಕೆಗಳಿಗಾಗಿ ಹಂಚಿಕೆಯಾಗಿದೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಅಲ್ಲಿರುವಂಥ ಪ್ರದೇಶ 250 ಎಕರೆಗಳಿವೆ ಎಂದಾಯಿತು, ಜಾಸ್ತಿ ಇಲ್ಲವೆಂದಾಯಿತು.

ಶ್ರೀ ಆರ್. ವಿ. ದೇಶಪಾಂಡೆ : ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಎಷ್ಟು ಭೂಮಿ ಬೇಕೋ ಅಷ್ಟನ್ನೂ ಕೊಡುತ್ತೇವೆ. ಅವಶ್ಯಕತೆಯಿದ್ದರೆ ಪುನಃ ಹೆಚ್ಚು ಜಮೀನನ್ನು ಸ್ವಾಧೀನಪಡಿಸಿಕೊಂಡು ಒದಗಿಸುವ ವ್ಯವಸ್ಥೆ ಮಾಡುತ್ತೇವೆ.

11.40 ಪಿ.ಎಂ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಈ ನೀತಿಯನ್ನು ಸಣ್ಣ ಕೈಗಾರಿಕೆಗಳಿಗೆ ಮಾತ್ರ ಅನುಸರಿಸುತ್ತೀರೋ ಅಥವಾ ಬೃಹತ್ ಕೈಗಾರಿಕೆಗಳಿಗೂ ಅನುಸರಿಸುತ್ತೀರೋ ಎನ್ನತಕ್ಕದ್ದು ಮೊದಲ ಪ್ರಶ್ನೆ? ಜಿಲ್ಲಾಧಿಕಾರಿಗಳ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ತಾವೇನು

ಹೇಳಿದ್ದೀರಿ ಅದನ್ನು ಸಣ್ಣ ಕೈಗಾರಿಕೆಗಳಿಗೆ ಮಾತ್ರ ಅನ್ವಯಿಸುತ್ತೀರೋ ಅಥವಾ ದೊಡ್ಡ ಕೈಗಾರಿಕೆಗಳಿಗೂ ಅನುಸರಿಸುತ್ತೀರೋ? ಎರಡನೆಯದಾಗಿ, ನಿರ್ವಸಿತರಿಗೆ ಪರಿಹಾರವನ್ನು ತಕ್ಷಣವೇ ಕೊಡುವ ಬಗ್ಗೆ ತಮ್ಮ ನಿಯಮದಲ್ಲಿ ಇದೆಯೇ?

ಶ್ರೀ ಆರ್. ವಿ. ದೇಶಪಾಂಡೆ : ಸನ್ಮಾನ್ಯ ಅಧ್ಯಕ್ಷರೆ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ ನಾವೇನು ಭೂಮಿಯನ್ನು ಕೊಡುತ್ತೇವೆ ಅದನ್ನು ಕೊಡುವುದಕ್ಕೂ ಮೊದಲ ನಾವು ಲ್ಯಾಂಡ್ ಆಡಿಟ್ ಮಾಡುತ್ತೇವೆ. ನೂರು ಎಕರೆ ಒಳಗಡೆ ಭೂಮಿಯನ್ನು ಕೊಡಬೇಕಾದರೆ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಪರಿಣಿತವನ್ನು ಒಳಗೊಂಡಂತೆ ಒಂದು ಸಮಿತಿ ಇದೆ ಅದರಲ್ಲಿ ಭೂಮಿಯ ಅವಶ್ಯಕತೆಯ ಬಗ್ಗೆ ನಿರ್ಣಯವಾಗುತ್ತದೆ. ನೂರು ಎಕರೆಗಳ ಮೇಲ್ಪಟ್ಟು ಭೂಮಿಯನ್ನು ಕೇಳಿದರೆ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದ್ದೇವೆ. ಅಲ್ಲೂ ತಾಂತ್ರಿಕ ಪರಿಣಿತರನ್ನು ಕರೆಸಿ, ಪ್ರಾಜೆಕ್ಟ್ ರಿಪೋರ್ಟ್‌ನ್ನು ನೋಡಿ, ಎಷ್ಟು ಅವಶ್ಯಕತೆ ಇದೆಯೋ ಅಷ್ಟನ್ನು ಕೊಡುವ ವ್ಯವಸ್ಥೆಯಾಗುತ್ತದೆ. ಇನ್ನು ಭೂಮಿಯ ಸ್ವಾಧೀನಕ್ಕೆ ಪರಿಹಾರವನ್ನು ಕೊಡುವ ಬಗ್ಗೆ ಅವರು ಕೇಳಿದ್ದಾರೆ. ನಾವೆ ಈ ಕೆಲಸವನ್ನು ಕೆ.ಐ.ಎ.ಡಿ.ಬಿ. ಯ ಮೂಲಕ ಮಾಡುತ್ತೇವೆ. ಇದನ್ನು ಎರಡು ವಿಧಾನದಲ್ಲಿ ಮಾಡುತ್ತೇವೆ. ಒಂದು, 28-4-1995ರ ನೋಟಿಫಿಕೇಷನ್ ಆದನಂತರ ಯಾರು ಭೂಮಿಯನ್ನು ಕಳೆದುಕೊಳ್ಳುತ್ತಾರೆ ಅವರ ಜೊತೆ ಚರ್ಚೆ ಮಾಡಿ ತಕ್ಷಣವೇ ಹಣವನ್ನು ಕೊಡಬಹುದು. ಚರ್ಚೆಯಲ್ಲಿ ಒಪ್ಪಂದವಾಗದಿದ್ದರೆ ಲ್ಯಾಂಡ್ ಅಕ್ವಿಜಿಷನ್ ಆಕ್ಟನಲ್ಲಿ ಏನು ಇದೆ ಅದರ ಪ್ರಕಾರ ಅವಾರ್ಡ ಪಾಸ್ ಆಗುತ್ತದೆ, ನಾವು ಹಣವನ್ನು ಡಿಪಾಜಿಟ್ ಮಾಡುತ್ತೇವೆ, ಹಣದ ಪೆಮೆಂಟ್ ಆಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್ : ಅಧ್ಯಕ್ಷರೆ, ಆ ಹಣವನ್ನು ವಸೂಲಾತಿ ಮಾಡಲು ಕೆ.ಐ.ಎ.ಡಿ.ಬಿ.ಗೆ ಹತ್ತು ಪರಸೆಂಟ್ ಕಮಿಷನ್ ಹಣವನ್ನು ಕೊಡುವ ಅವಶ್ಯಕತೆ ಇದೆಯೇ? ಪರಿಹಾರಧನವನ್ನು ಪಡೆಯಲೂ ಹತ್ತು ಪರಸೆಂಟ್ ಕಮಿಷನ್ ಕೊಡತಕ್ಕ ದುಸ್ಥಿತಿ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಏರಿಯಾ ಡೆವಲಪಮೆಂಟ್ ಬೋರ್ಡನವರು ಸರ್ವೀಸ್ ಚಾರ್ಜಸ್ ಎಂದು ಸುಮಾರು ಇಪ್ಪತ್ತೆರಡು ಪರಸೆಂಟ್ ಹಣವನ್ನು ತೆಗೆದುಕೊಳ್ಳುತ್ತಾರೆ. ಈ ವ್ಯವಸ್ಥೆಯನ್ನು ಹದಿನೈದು ಇಪ್ಪತ್ತುವರ್ಷಗಳ ಹಿಂದೆ ಮಾಡಿದ್ದುದು. ಆ ಕಾಲದಲ್ಲಿ ಬೆಲೆ ಕಡಿಮೆ ಇತ್ತು, ಇಂದು ಬೆಲೆಗಳು ಜಾಸ್ತಿಯಾಗಿದೆ. ಇಪ್ಪತ್ತೆರಡು ಪರಸೆಂಟ್ ಜಾಸ್ತಿಯಾಗುತ್ತದೆಂದು ನಾನೂ ಒಪ್ಪುತ್ತೇನೆ. ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಈಗಾಗಲೇ ಕೆ.ಐ.ಎ.ಡಿ.ಬಿ.ಗೆ ಆದೇಶವನ್ನು ಕೊಟ್ಟಿದ್ದೇವೆ. ಆ ಬೋರ್ಡ ಸಹ ತನ್ನ ಕೆಲಸವನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಅದರ ಮೂಲಕ ನಾವು ಇನಪ್ರಾಸ್ಟ್ರಕ್ಚರನ್ನು ಡೆವಲಪಮಾಡಬೇಕಾಗುತ್ತದೆ. ಅದನ್ನು ಕಡಿಮೆ ಮಾಡುವುದಕ್ಕೂ ನಮಗೆ ಸಾಧ್ಯವಿಲ್ಲ. ಕೈಗಾರಿಕೆಗಳಿಗೆ ಯಾವ ರೀತಿಯಲ್ಲಿ ಸಹಾಯ ಮಾಡಲು ಸಾಧ್ಯವಾಗುತ್ತದೆ, ಏನು ಕಡಿಮೆ ಮಾಡಲು ಸಾಧ್ಯವಾಗುತ್ತದೆ ಎಂಬ ಬಗ್ಗೆ ಪರಿಶೀಲನೆ

ಮಾಡಲು ಕೆ.ಐ.ಎ.ಡಿ.ಬಿ.ಗೆ ಸೂಚನೆ ಮಾಡಿದ್ದೇವೆ. ನಾವೇನು ಹಣವನ್ನು ತೆಗೆದುಕೊಳ್ಳುತ್ತೇವೆ ಅದರಿಂದ ರಸ್ತೆ, ನೀರಿನ ಸೌಲಭ್ಯ ಮುಂತಾದವುಗಳನ್ನು ಅಭಿವೃದ್ಧಿಪಡಿಸಲು, ಇನಫ್ರಾಸ್ಟಕ್ಚರ್ ಅಭಿವೃದ್ಧಿ ಮಾಡಲು ಖರ್ಚು ಮಾಡುತ್ತೇವೆ. ಆ ದೃಷ್ಟಿಯಿಂದ ಇದರಲ್ಲಿ ಏನು ಕಡಿಮೆ ಮಾಡಲು ಸಾಧ್ಯವಾಗುತ್ತದೆಯೇ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಪರಿಶಿಷ್ಟ ಜಾತಿ/ವರ್ಗಗಳ ಆಯೋಗ ರಚನೆ.

100 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗ ರಚಿಸಿರುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ) *ಇದ್ದ ಇದರ ಕಾರ್ಯವ್ಯಾಪ್ತಿಯ ಬಗ್ಗೆ ಏನಾದರೂ ಸಮಿತಿಯನ್ನು ರಚಿಸಲಾಗಿದೆಯೇ?*

ಇ) *ಹಾಗಿದ್ದಲ್ಲಿ, ಇದು ಯಾವಾಗಿನಿಂದ ಪ್ರಾರಂಭವಾಗುವುದು?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎನ್. ಯೋಗೇಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಮಂಡಲ ಆಯೋಗದ ವರದಿಯ ಮೇಲೆ ಸುಪ್ರೀಂ ಕೋರ್ಟ ಕೊಟ್ಟ ನಿರ್ಣಯದ ಪ್ರಕಾರ ಪ್ರತಿಯೊಂದು ರಾಜ್ಯಗಳಲ್ಲಿ ಈ ಆಯೋಗವನ್ನು ಆರಂಭ ಮಾಡಬೇಕಾಗಿತ್ತು. ಇದರ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆಯನ್ನು ಕಳೆದ ಸೆಪ್ಟಂಬರನಿಂದ ಕೊಡುತ್ತಿದ್ದೀರಿ. ತಾವು ಇನ್ನೂ ಏಕೆ ಆ ಆಯೋಗವನ್ನು ಮಾಡಿಲ್ಲ? ಈ ಆಯೋಗದ ಕಾರ್ಯವ್ಯಾಪ್ತಿಯ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟಿಲ್ಲ. ಹೈಕೋರ್ಟನಲ್ಲಿ ವಿಶೇಷವಾಗಿ ಕಾನೂನು ವಿಭಾಗಗಳನ್ನು ಮಾಡಿಕೊಂಡು ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕವಾಗಿ ವಕೀಲರುಗಳನ್ನು ನೇಮಕ ಮಾಡಿಕೊಂಡು ಅವರುಗಳಿಗೆ ಪ್ರತ್ಯೇಕವಾದ ವ್ಯವಸ್ಥೆ ಮಾಡಿಕೊಳ್ಳುವುದು ಇದರಲ್ಲಿ ಅಡಕವಾಗಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಸನ್ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್ ಮಂಡಲ ಆಯೋಗದ ಬಗ್ಗೆ ಆಜ್ಞೆ ಮಾಡಿದ್ದು ಶಾಶ್ವತ ಹಿಂದುಳಿದ ವರ್ಗಗಳ ಕಮೀಷನ್ ಬಗ್ಗೆ. ಆದರೆ ಎಸ್. ಸಿ ಮತ್ತು ಎಸ್. ಟಿ. ಪರ್ಮನೆಂಟ್ ಕಮೀಷನ್ ಬಗ್ಗೆ ಸುಪ್ರೀಂ ಕೋರ್ಟ ಯಾವುದನ್ನೂ ಹೇಳಿಲ್ಲ. ಆದರೂ ಬೇರೆ ಬೇರೆ ಸಂಘಸಂಸ್ಥೆಗಳು, ಶಾಸಕರು ಇಂಥಿಂಥ ಜಾತಿಗಳದವರು ಪರಿಶಿಷ್ಟ ಜಾತಿಯ ಅಡಿಯಲ್ಲಿ ಬರುತ್ತದೆ ಆದ್ದರಿಂದ ಆ ಜಾತಿಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡವರಿಗೆ ಹಿಂದುಳಿದ ವರ್ಗದ ಆಯೋಗ. ಯಾವ ರೀತಿ ಇದೆಯೋ ಅದೇ